## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 763 (957) |
| ಉತ್ತರಿಸಬೇಕಾದ ದಿನಾಂಕ | 24.08.2026 |
| ಉತ್ತರಿಸಬೇಕಾದ ಸಚಿವರು | ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು |

******

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಜಲ ಮಾಲಿನ್ಯ ನಿಯಂತ್ರಣ ಕಾಯ್ದೆ 1974 ಹಾಗೂ ವಾಯು ಮಾಲಿನ್ಯ ನಿಯಂತ್ರಣಾ ಕಾಯ್ದೆ 1981ರ ಅಡಿಯಲ್ಲಿ ಕೇಂದ್ರ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯು ನಿಯಮ 18(ಬಿ) ಅನ್ವಯ ಮಾಲಿನ್ಯದ ಮಾನದಂಡಗಳನ್ನು ಆಧರಿಸಿ ವಿವಿಧ ಬಣ್ಣಗಳಿಂದ ಕೈಗಾರಿಕೆಗಳನ್ನು ವರ್ಗೀಕರಿಸಲು 2016ರ ಅಧಿಸೂಚನೆಯನ್ನು ಹಿಂಪಡೆದಿದ್ದು, ಇದನ್ನು ದಿನಾಂಕ:12.02.2025ರಿಂದ ಇಡೀ ದೇಶದಲ್ಲಿ ಕಡ್ಡಾಯವಾಗಿ ಜಾರಿಗೆ ತರಬೇಕೆಂದು ನಿರ್ದೇಶಿಸಿ, ಎಲ್ಲಾ ರಾಜ್ಯಗಳ ಮಾಲಿನ್ಯ ನಿಯಂತ್ರಣ ಮಂಡಳಿಗೆ ಕೇಂದ್ರ ಸರ್ಕಾರದ ಮಾಲಿನ್ಯ ನಿಯಂತ್ರಣ ಮಂಡಳಿಯು ಅಧಿಸೂಚನೆ ಕಳುಹಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು, ಸರ್ಕಾರದ ಗಮನಕ್ಕೆ ಬಂದಿದೆ. |
| ಆ) | ಬಂದಿದ್ದಲ್ಲಿ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಈ 2025ರ ಅಧಿಸೂಚನೆಯನ್ನು ಜಾರಿಗೆ ತಂದಿದೆಯೇ: ಹಾಗಿದ್ದಲ್ಲಿ, ಈ ಬಗ್ಗೆ ವಿವರ ನೀಡುವುದು; | ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ದಿನಾಂಕ:12.02.2025 ರಂದು ಹೊರಡಿಸಿರುವ ಅಧಿಸೂಚನೆಯನ್ನು ಪ್ರಸ್ತುತ ಜಾರಿಗೆ ತಂದಿರುವುದಿಲ್ಲ. ಸದರಿ ಅಧಿಸೂಚನೆಯನ್ನು ಜಾರಿಗೆ ತರುವ ವಿಷಯವು ಪರಿಶೀಲನಾ ಹಂತದಲ್ಲಿರುತ್ತದೆ. |
| ಇ) | ಒಂದು ವೇಳೆ ಈ 2025ರ ಅಧಿಸೂಚನೆಯನ್ನು ಜಾರಿಗೆ ಬಾರದಿದ್ದಲ್ಲಿ ಇದನ್ನು ಯಾವಾಗ ಜಾರಿಗೆ ತರಲಾಗುವುದು ವಿವರ ನೀಡುವುದು; | ಸದರಿ ವಿಷಯವು ಪ್ರಸ್ತುತ ಪರಿಶೀಲನಾ ಪ್ರಕ್ರಿಯೆಯಲ್ಲಿರುತ್ತದೆ. |

| | | |
|---|---|---|
| ಈ) | ಈ ಅಧಿಸೂಚನೆಯನ್ನು ಜಾರಿಗೆ ತರದೆ ಸರ್ಕಾರಕ್ಕೂ ಮಾಹಿತಿ ನೀಡದೆ. ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಈ ಬಗ್ಗೆ ವಿಳಂಬ ಧೋರಣೆಯನ್ನು ಅನುಸರಿಸಿದ್ದಲ್ಲಿ ಅಲ್ಲಿನ ಅಧಿಕಾರಿ/ನೌಕರರ ಮೇಲೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ಸದರಿ ವಿಷಯವು ಪ್ರಸ್ತುತ ಪರಿಶೀಲನಾ ಪ್ರಕ್ರಿಯೆಯಲ್ಲಿರುತ್ತದೆ. |

**ಸಂಖ್ಯೆ:** ಅಪಜೀ 235 ಇಪಿಸಿ 2026

**(ರಾಮಲಿಂಗಾರೆಡ್ಡಿ)**

ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು.